ಕೂಡ ನಮಗೆ ಸಹಕರಿಸಬೇಕು ಮತ್ತು ಅವರೂ ಸಹಭಾಗಿಗಳಾಗಬೇಕು ಎಂದು ಹೇಳಿದರು. ಈಗಾಗಲೇ ನಾನು ಹೇಳಿದ್ದೇನೆ. ಬಹುಶಃ ಆದು ಪತ್ರಿಕೆಯಲ್ಲಿ ಬಂದಿದೆ. ನಾನು ಆ ವೇಳೆಗೆ ಸ್ಪಷ್ಟವಾಗಿ ಹೇಳಿದ್ದೇನೆ. ದುರ್ದೈವ ನಿಮ್ಮ ಪಕ್ಷವೇ ಅಲ್ಲ ಆರೂವರೆ ವರ್ಷಗಳ ಕಾಲ ಅಧಿಕಾರದಲ್ಲಿತ್ತು, ಆಗ ಹಣಕಾಸಿನ ಪರಿಸ್ಥಿತಿ ಏನಿತ್ತು, ಹೇಗೆ ಇತ್ತು, ಏನು ಮಾಡಿಬಿಟ್ಟು ಹೋಗಿದ್ದಾರೆ ಎನ್ನುವುದು ನಿಮಗೆ ಗೊತ್ತಿದೆ, ಒಂದುವೇಳೆ ನನಗೆ ಶಕ್ತಿ ಇದ್ದಿದ್ದರೆ ನೀವು ಹೇಳುವುದಕ್ಕಿಂತಲೂ ಮೊದಲು ನಾನು ಮುಂದಾಗಬಹುದಾಗಿತ್ತು, ದುರ್ದೈವದಿಂದ ಆ ಶಕ್ತಿ ನನಗೆ ಇಲ್ಲ. ಇವತ್ತು ನೀವು ಕೇಳಬಹುದು ಆದರೆ ನಾನು ಇವತ್ತು ನಿಮ್ಮ ಜೊತೆಯಲ್ಲಿ ಸಹಭಾಗಿಯಾಗುತ್ತೇನೆ. ನಾನು ಇಷ್ಟು ಪರ್ಸೆಂಟೇಜ್ ನಿಮಗೆ ಸಹಕಾರ ಮಾಡುತ್ತೇನೆ ಎನ್ನುತಕ್ಕಂಥ ವಿಚಾರ ಅಥವಾ ಶಕ್ತಿ ನನ್ನಲಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಮತ್ತು ಎರಡನೇ ಸಲ ನಾನು ಹೋದಾಗ ಕೂಡ ಇದರ ಬಗ್ಗೆ ಅವರು ಪ್ರಸ್ತಾಪ ಮಾಡಲಿಲ್ಲ. ಅದನ್ನೂ ನಾನು ಪತ್ರಿಕೆಯಲ್ಲಿ ಹೇಳಿದ್ದೇನೆ. ಇವತ್ತು ಆ ಶಕ್ತಿ ಇದ್ದಿದ್ದರೆ ನೀವು ಕೇಳಬೇಕಾಗಿರಲಿಲ್ಲ. ಅವರು ಇಲ್ಲ, ನಾವೂ ನೀವೂ ಎಲ್ಲರೂ ಸೇರಿ ಮಾಡಬೇಕು ಎಂದು ಹೇಳುತ್ತಾ ಇದ್ದಾರೆ. ಅದು ಆಗುವ ಹಾಗಿಲ್ಲ, ನಮಗೆ ಶಕ್ತಿ ಇಲ್ಲ, ಒಂದುವೇಳೆ ನಮಗೇನಾದರೂ ಶಕ್ತಿ ಇದ್ದರೆ ಸರ್ಕಾರದ್ದು ಏನಾದರೂ ಸಾಲ ಇದ್ದರೆ ಮನ್ನಾ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಮತ್ತು ಅದರ ಮೇಲೆ ಏನಾದರೂ ಶಕ್ತಿ ಇತ್ತು ಅಂದರೆ, ನಮ್ಮ ಹತ್ತರ ಒಂದುವೇಳೆ ನಾಳೆ ಏನಾದರೂ ಹಣಕಾಸಿನ ಶಕ್ತಿ ಬೇತರಿಸಿಕೊಂಡು ಹೆಚ್ಚಾದರೆ ಬಹುಶಃ ಅದೇ ರೈತರಿಗೆ ಪಂಪ್‌ಗೆ ಏನರ್ಜೈಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಅದೇ ರೈತರಿಗೆ ನೀರಾವರಿ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅಥವಾ ಅದೇ ಹಳ್ಳಿಯಲ್ಲಿರುವಂಥ ಕೆರೆ ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತೇನೆ ಅಥವಾ ಒಂದು ರೂಪಾಯನ್ನು ಆ ಹಳ್ಳಿಯವರೆಗೆ ಮುಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಯೇ ಹೊರತು ಇವತ್ತು ನೀವು ಹೇಳಿದಂಥ ಈ ೧೪ ಸಾವಿರ ಕೋಟಿ ರೂಪಾಯಿಯಲ್ಲಿ ಒಂದು ಭಾಗ ನಾವು ಜವಾಬ್ದಾರಿಯನ್ನು ಹೊತ್ತುಕೊಳ್ಳುವಂಥ ಪರಿಸ್ಥಿತಿಯಲ್ಲಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ಇವತ್ತು ಪತ್ರಿಕೆಯಲ್ಲಿ ಕೇಂದ್ರದ ಹಣಕಾಸಿನ ಸಚಿವರು ಹೇಳಿದ್ದಾರೆ ಈ ಬಗ್ಗೆ ನಾವು ನೀತಿಯನ್ನು ರೂಪಿಸುತ್ತಾ ಇದ್ದೇವೆ ಎಂದು ಹೇಳಿದ್ದಾರೆ. ಕಡೇಪಕ್ಷ ಮುಂದಿನ ಬಡ್ಜೆಟ್ ಅಧಿವೇಶನವರೆಗಾದರೂ ಇದನ್ನು ಡಿಫರ್ ಮಾಡಲಿಕ್ಕೆ ಆಗುತ್ತದೋ ಇಲ್ಲವೋ ಎಂದು ಸ್ಪಷ್ಟವಾಗಿ ಹೇಳಿದರೆ ಪ್ರಾಮಾಣಿಕವಾಗಿ ಯಾರು ಹಣ ಕಟ್ಟಿದ್ದಾರೆ ಅವರನ್ನಾದರೂ ಉಳಿಸಬಹುದು. ಈ ಬಗ್ಗೆ ಮಾನ್ಯ ಮಂಖ್ಯಿ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕು ಎಂದು ಬಯಸುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆ ನಾನು ಹೇಳಿದ್ದೇನೆ, ಈ ಎಲ್ಲ ವಿಚಾರಗಳ ಬಗ್ಗೆ ಕೇಂದ್ರದಲ್ಲಿ ನನ್ನ ಮುಖಂಡತ್ವದಲ್ಲಿ ಆಲ್‌ಪಾರ್ಟಿ ಡೆಲಿಗೇಷನ್ ತೆಗೆದುಕೊಂಡು ಹೋಗಿ ಚರ್ಚೆಮಾಡುವುದಕ್ಕೆ ತಯಾರಿದ್ದೇನೆ. ಮತ್ತು ಮಾನ್ಯ ವಿರೋಧಪಕ್ಷದ ನಾಯಕರು ಒಪ್ಪಿದ್ದಾರೆ. ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಎಂದು ಹೋಗಬೇಕು ಎನ್ನುವುದನ್ನು ತೀರ್ಮಾನ ಮಾಡಿ ಮೂರನೇ ಸಲ ಇದರ ಸಲುವಾಗಿ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಮಾನ್ಯ ಅಧ್ಯಕ್ಷರೆ, ರಾಜ್ಯಸರ್ಕಾರ ತನ್ನ ಪಾಲಿನ ಹೊಣೆಗಾರಿಕೆಯನ್ನು ತಪ್ಪಿಸಿಕೊಂಡರೆ ಈ ನಿಯೋಗ ಹೋಗುವುದರಲ್ಲಿ ಅರ್ಥವಿಲ್ಲ. ರಾಜ್ಯಸರ್ಕಾರ ರೈತರ ಬಗ್ಗೆ ತನ್ನ ಪಾಲಿನ ಜವಾಬ್ದಾರಿ ಏನು, ತಾನು ಎಲ್ಲಿಯವರೆಗೆ ಸಾಲ ಮನ್ನಾ ಮಾಡಲಿಕ್ಕೆ ಶಕ್ಯವಿದೆ, ಬಡ್ಡಿ ದರ ಕಡಿಮೆ ಮಾಡಲಿಕ್ಕೆ ಶಕ್ಯವಿದೆ ಎನ್ನುವ ವಿಚಾರವಿಲ್ಲದೆ ಕೇವಲ ಒಂದು ನಿಯೋಗ ಒಯ್ದು ಕೇಂದ್ರದಲ್ಲಿ ಚರ್ಚೆ ಮಾಡುವುದರಲ್ಲಿ ಅರ್ಥವಿಲ್ಲ. ಇಲ್ಲಿಯವರೆಗೆ ಈ ಸದನದಲ್ಲಿ ಆದಂಥ ಚರ್ಚೆ ರೈತರಿಗೆ ಯಾವ ಪ್ರಯೋಜನವಿಲ್ಲದೆ ಏನಾಗಿದೆ ಇದೇರೀತಿ ನಿಯೋಗ ಹೋಗುವುದರಿಂದಲೂ ಆಗುತ್ತದೆ ಇದರ ಬಗ್ಗೆ ಅವರು ಕೊಡತಕ್ಕ ಪಾಲು ಏನು ಎನ್ನುವುದನ್ನು ಹೇಳಿ ನಿಯೋಗವನ್ನು ನೇಮಿಸಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಗವರ್ನರ ಸೆಳೆಯುವ ಸೂಚನೆಗಳು

(೧) ಮೈಸೂರಿನ ದೇವರಾಜ ಮಾರ್ಕೆಟ್‌ನಲ್ಲಿ ಸಂಭವಿಸಿದ ಬೆಂಕಿ ದುರಂತದ ಬಗ್ಗೆ

ಶ್ರೀ ಕೆ. ಹರ್ಷಕುಮಾರಗೌಡ.—ಮಾನ್ಯ ಅಧ್ಯಕ್ಷರೆ, ಇದೇ ತಿಂಗಳು ೧೫ ರಂದು ರಾತ್ರಿ ಮೈಸೂರು ನಗರದ ದೇವರಾಜ ಮಾರ್ಕೆಟ್‌ನಲ್ಲಿ ಸಂಭವಿಸಿದ ಬೆಂಕಿ ದುರಂತದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಗವರ್ನರ ಸೆಳೆಯುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ. (ಆರ್ಥಿಕ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ದಿನಾಂಕ–೧೫–೧೨–೮೯ರ ೨೨–೦೦ ಗಂಟೆಗೆ ಮೈಸೂರಿನ ದೇವರಾಜ ಮಾರುಕಟ್ಟೆಯಲ್ಲಿ ಅಗ್ನಿ ದುರಂತ ಸಂಭವಿಸಿತು. ಅಗ್ನಿಶಮನ ಕೇಂದ್ರ ಮೈಸೂರು ಇವರಿಂದ ಸುದ್ದಿ ಮುಟ್ಟಿದ ಕೂಡಲೇ ಸರಸ್ವತೀಪುರಂ ಅಗ್ನಿಶಾಮಕ ಠಾಣೆಯಿಂದ ೨ ಜಲವಾಹಕ ವಾಹನಗಳು ಸ್ಥಳಕ್ಕೆ ಧಾವಿಸಿದವು. ಜೊತೆಗೆ ಬಿ.ಇ.ಎಂ.ಎಲ್.ನ ೨ ಜಲವಾಹಕ ವಾಹನಗಳನ್ನು ಮಂಡ್ಯ ಅಗ್ನಿಶಾಮಕ ಠಾಣೆಯ ಒಂದು ಜಲವಾಹಕ ವಾಹನವನ್ನು ಮತ್ತು ರೈಲ್ವೆ ಸಂರಕ್ಷಣಾ ದಳದ ಒಂದು ಜಲವಾಹಕ ವಾಹನವನ್ನು ಬೇಕಿಯನ್ನು ಹತೋಟಿ ತರಲು ಸ್ಥಳಕ್ಕೆ ಕರೆ ತರಲಾಯಿತು. ತತ್ಪರಿಣಾಮವಾಗಿ ೨ ಗಂಟೆಗಳೊಳಗಾಗಿ ಬೆಂಕಿಯನ್ನು ಹತೋಟಿಗೆ ತರಲಾಯಿತು, ೧೬–೧೨–೮೯ರ ೦೬.೦೦ ಗಂಟೆಗೆ ಸಂಪೂರ್ಣವಾಗಿ ಬೆಂಕಿಯನ್ನು ನಂದಿಸಲಾಯಿತು.

ಸ್ಥಳೀಯ ಪೋಲೀಸರು ಸ್ಥಳವನ್ನು ಸುತ್ತುಗಟ್ಟಿ ಎಲ್ಲಾ ಅಂಗಡಿಗಳ ಆಸ್ತಿಪಾಸ್ತಿಗಳನ್ನು ರಕ್ಷಿಸಿದರೆಲ್ಲದೆ ಮಾರುಕಟ್ಟೆಯ ಹೊರಗೆ ಸೇರಿದ್ದ ಗುಂಪನ್ನು ಹತೋಟಿಯಲ್ಲಿ ಇಟ್ಟಿದ್ದರು. ದೇವರಾಜ ಆರಕ್ಷಕ ಠಾಣೆಯಲ್ಲಿ ಐ.ಪಿ.ಸಿ. ಸೆಕ್ಷನ್ ೪೩೫–೪೩೬ರ ಅಡಿಯಲ್ಲಿ ಕ್ರೈಮ್ ಸಂ ೧೨೯/೮೯ರ ಸಂಖ್ಯೆಯಲ್ಲಿ ಪ್ರಕರಣವನ್ನು ಕೈಗೊಳ್ಳಲಾಗಿದೆ ಮತ್ತು ದೇವರಾಜ ಎ ವಿಭಾಗದ ಅಸಿಸ್ಟೆಂಟ್ ಕಮಿಷನರ್ ಆಫ್ ಪೋಲೀಸ್ ಆವರಿಗೆ ಪ್ರಕರಣದ ತನಿಖೆಯನ್ನು ವಹಿಸಲಾಗಿದೆ. ಅಗ್ನಿ ದುರಂತದ ಕಾರಣ ಕೂಡಲೇ ತಿಳಿದುಬಂದಿಲ್ಲ. ಮತ್ತು ಈ ವಿಷಯವು ಪೋಲೀಸರ ತನಿಖೆಯಲ್ಲಿದೆ.

ಮೇಲ್ಕಂಡ ಬೆಂಕಿ ಅಕಸ್ಮಿಕದಲ್ಲಿ ೧೫೨ ಅಂಗಡಿಗಳಿಗೆ ಹಾನಿಯುಂಟಾಗಿದ್ದು ಆ ಪೈಕಿ ೬೦ ಅಂಗಡಿಗಳು ಮಾಲು ಸಮೇತ ಸಂಪೂರ್ಣವಾಗಿ ಸುಟ್ಟುಹೋಗಿವೆ. ಅಂಗಡಿಗಳವರಿಗೆ ಸಂಭವಿಸಿರುವ ಒಟ್ಟು ನಷ್ಟವು ಸುಮಾರು ರೂ. ೨೩,೨೫,೦೦೦–೦೦ ಅಂದಾಜು ಮಾಡಲಾಗಿದೆ. ನಗರಪಾಲಿಕೆಯ ಸುಮಾರು ರೂ. ೬.೫ ಲಕ್ಷದಷ್ಟು ಆಸ್ತಿಯೂ ಸಹಾ ನಷ್ಟವಾಗಿರುತ್ತದೆ.

ಮೈಸೂರಿನಲ್ಲೇ ತಂಗಿದ್ದ ಮಾನ್ಯ ಆರ್ಥಿಕ ಮಂತ್ರಿಗಳು ಹಾಗೂ ಜಿಲ್ಲಾ ಮಂತ್ರಿಗಳು ದಿನಾಂಕ ೧೫–೧೨–೮೯ ರಂದು ಸ್ಥಳಕ್ಕೆ ಭೇಟಿ ನೀಡಿ ಸಂತ್ರಸ್ತರೊಡನೆ ಮಾತುಕತೆ ನಡೆಸಿ ಸೂಕ್ತ ಪರಿಹಾರ ಮತ್ತು ಪುನರ್ವಸತಿ ಕ್ರಮಗಳನ್ನು ತೆಗೆದುಕೊಳ್ಳಲು ಅಧಿಕಾರಿಗಳ ಸಭೆಗಳನ್ನು ಏರ್ಪಡಿಸಿದ್ದರು.

ದೇವರಾಜ ಮಾರುಕಟ್ಟೆಯಲ್ಲಿ ಅಗ್ನಿಶಮನ ಕಾರ್ಯದಲ್ಲಿ ಮತ್ತು ಆಸ್ತಿ ಪಾಸ್ತಿಗಳಿಗೆ ತಕ್ಷಣ ರಕ್ಷಣೆ ಒದಗಿಸುವಲ್ಲಿ ನೆರವಾದ ಅಗ್ನಿಶಾಮಕ ಸೇವಾ ಇಲಾಖೆ ಮತ್ತು ಪೋಲೀಸ್ ಇಲಾಖೆಯವರ ಕಾರ್ಯದ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿರುತ್ತಾರೆ.

†ಶ್ರೀ ಕೆ. ಹರ್ಷಕುಮಾರಗೌಡ.(ಜಾವರಾಜ)—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಮಾನ್ಯ ಹಣಕಾಸಿನ ಸಚಿವರು ಹೇಳಿಕೆ ಕೊಟ್ಟಿದ್ದಾರೆ. ಮೈಸೂರು ನಗರದಲ್ಲಿ ಇದೇ ತಿಂಗಳು ೧೫ನೇ ತಾರೀಖಿನ ರಾತ್ರಿ ಸುಮಾರು ೯–೪೫ರ ಸಮಯದಲ್ಲಿ ಅಗ್ನಿ ದುರಂತ ನಡೆಯಿತು. ಇದು ನನ್ನ ಕ್ಷೇತ್ರದಲ್ಲಿ ನಡೆದಿದೆ. ೧೯೮೧ರಲ್ಲಿ ಇದೇ ಮಾರುಕಟ್ಟೆಯಲ್ಲಿ ಅಗ್ನಿ ದುರಂತ ನಡೆದಿತ್ತು. ಈಗ ೧೯೯೦ ರಲ್ಲಿ ಮತ್ತೆ ನಡೆದಿದೆ. ಮೈಸೂರಿನ ಹೃದಯದಂತಿರುವ ಅತ್ಯಂತ ಪ್ರತಿಷ್ಠಿತವಾದ ದೇವರಾಜ ಮಾರುಕಟ್ಟೆಯಲ್ಲಿ ಅಗ್ನಿ ದುರಂತ ನಡೆದು ಸುಮಾರು ೨೦೦ ಅಂಗಡಿಗಳು ಭಸ್ಮವಾಗಿ ವರ್ತಕರು ಬೀದಿಪಾಲಾಗಿದ್ದಾರೆ. ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಇವತ್ತು ಸರ್ಕಾರ ಯಾವ ಒಂದು ಪರಿಹಾರ ಧನವನ್ನು ಘೋಷಣೆ ಮಾಡಿದೆ ಅದು ಬಹಳ ಕಡಿಮೆ ಪ್ರಮಾಣದ್ದು. ದುರ್ಘಟನೆ ನಡೆದ ಸಂದರ್ಭದಲ್ಲಿ ರಾಜ್ಯದ ಹಣಕಾಸಿನ ಸಚಿವರಾದ ಶ್ರೀ ರಾಜಶೇಖರ ಮೂರ್ತಿಯವರು ರಾತ್ರಿ ೧೨ ಗಂಟೆ ಸಮಯದಲ್ಲಿ ಸ್ಥಳಕ್ಕೆ ಬಂದು ಸಂತ್ರಸ್ತರನ್ನು ಸಂತೈಸಿ, ತತ್ಕ್ಷಣ ಒಂದು ಸಾವಿರ ರೂಪಾಯಿಗಳ ಪರಿಹಾರಧನವನ್ನು ಘೋಷಿಸಿದರು. ವ್ಯಾಪಾರವನ್ನೇ ನಂಬಿಕೊಂಡು ಜೀವನ ಮಾಡುತ್ತಿದ್ದ ವರ್ತಕ ಬಾಂಧವರು ಇಂದು ಬೀದಿಪಾಲಾಗಿದ್ದಾರೆ, ಆದ್ದರಿಂದ ಸರ್ಕಾರ ಕೂಡಾವುಂಥ ಪರಿಹಾರಧನವನ್ನು ಹೆಚ್ಚು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಹೇಳಿಕೆ ಏನೆದೆ, ಪುನರ್ವಸತಿ ವ್ಯವಸ್ಥೆ ಬಗ್ಗೆ ಅಧಿಕಾರಿಗಳ ಸಭೆ ನಡೆದಿದೆ, ತಂತಾಗಿ ಮಾಡುತ್ತೆವೆಂದು ಹೇಳಿದ್ದಾರೆ. ನಾನಾದರೂ ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ಒಂದು ಸಲಹೆ ಕೊಡಲಿಕ್ಕೆ ಬಯಸುತ್ತೇನೆ. ಮೈಸೂರು ನಗರ ಅತ್ಯಂತ ಐತಿಹಾಸಿಕ ನಗರ, ಸಾಂಸ್ಕೃತಿಕ ಕೇಂದ್ರ, ಶೈಕ್ಷಣಿಕ ಕೇಂದ್ರವಾದಂಥ ನಗರ. ಸುಮಾರು ಐವತ್ತು ವರ್ಷಗಳಿಂದಲೂ ಅಲ್ಲಿ ಯಾವುದೇ ರೀತಿಯ ಹೊಸ ಮಾರುಕಟ್ಟೆಗಳ ನಿರ್ಮಾಣವಾಗಿಲ್ಲ. ಬೆಂಗಳೂರು ನಗರಕ್ಕೆ ಹೋಲಿಸಿದರೆ, ಎಲ್ಲಾ ರೀತಿಯಲ್ಲೂ ಮೈಸೂರು ನಗರ ಅಭಿವೃದ್ಧಿ ಕಾರ್ಯದಲ್ಲಿ ವಂಚಿತವಾಗಿದೆ. ಮೈಸೂರು ನಗರ

ಅತ್ಯಂತ ಪ್ರತಿಷ್ಠಿತವಾದಂಥ ನಗರ ಏನಿದೆ ಅದರ ಅಭಿವೃದ್ಧಿ ಕಾರ್ಯದಲ್ಲಿ ಸರ್ಕಾರ ಮಲತಾಯಿ ಧೋರಣೆ ತೋರಿಸದೆ ತುರ್ತಾಗಿ ಮೈಸೂರು ನಗರದ ಅಭಿವೃದ್ಧಿಯ ಕಡೆಗೆ ಹೆಚ್ಚು ಗಮನ ಹರಿಸಬೇಕು. ಅದರಲ್ಲೂ ಮೈಸೂರು ನಗರದಲ್ಲಿ ಅತ್ಯಂತ ಪ್ರತಿಷ್ಠಿತವಾದಂಥ, ಅತ್ಯಂತ ಸುಂದರವಾದಂಥ ದೇವರಾಜ ಮಾರ್ಕೆಟ್ ಏನಿತ್ತು ಅದರ ಪುನರ್‌ನಿರ್ಮಾಣದ ವ್ಯವಸ್ಥೆ ತಮ್ಮದು. ಈಗ ಸರ್ಕಾರಕ್ಕೆ ಹಣಕಾಸಿನ ತೊಂದರೆ ಇದ್ದರೂ ಕೂಡ ಹಂತಹಂತವಾಗಿ ಒಂದು ಒಳ್ಳೆಯ ಸಂಕೀರ್ಣವನ್ನು ಕಟ್ಟುವಂತಹ ವ್ಯವಸ್ಥೆಗೆ ಕಾರಣೀಭೂತರಾಗಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ಈಗ ಮೈಸೂರು ನಗರದಲ್ಲಿ ಸುಮಾರು ಹತ್ತು ಲಕ್ಷ ಪ್ರಜಾಸಂಖ್ಯೆ ಇದೆ. ಮಾನ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿಯೇ, ಮೈಸೂರು ನಗರದಲ್ಲಿ ಎರಡು ಅಗ್ನಿಶಾಮಕ ದಳಗಳು ಇದ್ದವು ಅವು ತಕ್ಷಣ ದುರಂತದ ಸ್ಥಳಕ್ಕೆ ಹೋದವು ಎಂದು ಹೇಳಿದ್ದಾರೆ. ಹತ್ತು ಲಕ್ಷ ಪ್ರಜಾಸಂಖ್ಯೆ ಇರತಕ್ಕ ನಗರಕ್ಕೆ ಕೇವಲ ಎರಡು ಅಗ್ನಿ ಶಾಮಕದಳಗಳು ಇದ್ದಾಗ ಇಂತಹ ಆಕಸ್ಮಿಕಗಳನ್ನು ತಡೆಗಟ್ಟಲಿಕ್ಕೆ ಯಾವರೀತಿ ಸಾಧ್ಯವಾಗುತ್ತದೆ. ಅದರಲ್ಲೂ ಕೂಡ ಅಗ್ನಿಶಾಮಕದಳದ ಸಿಬ್ಬಂದಿಯಾರಿದ್ದಾರೆ ಅವರು ಅಲ್ಲಿಗೆ ಬಂದು ನೀರಿಲ್ಲದೆ ಪರದಾಡುವಂತಹ ಪರಿಸ್ಥಿತಿಯನ್ನು ನಾನು ೧೦–೫೦ರಲ್ಲಿ ನೋಡಿದ್ದೇನೆ. ಅಲ್ಲಿ ಜನರು ಬೇಸತ್ತು ಕೂಗಾಡುತ್ತಿದ್ದುದನ್ನು ನಾನು ನೋಡಿದ್ದೇನೆ. ಅಲ್ಲಿ ಪೋಲೀಸರು ಇಲ್ಲದೇ ಹೋಗಿದ್ದರೆ ಎಲ್ಲವೂ ಲೂಟಿಯಾಗುತ್ತಿತ್ತು. ಅವತ್ತು ಪೋಲೀಸರು ಒಳ್ಳೆಯ ಕ್ರಮ ತೆಗೆದುಕೊಂಡು ವ್ಯಾಪಾರಸ್ಥರ ಆಸ್ತಿಪಾಸ್ತಿಯನ್ನು ಸಂರಕ್ಷಿಸಿದರು. ಈ ಸಂದರ್ಭದಲ್ಲಿ ಅಗ್ನಿಶಾಮಕದಳವನ್ನು ಹೆಚ್ಚಳ ಮಾಡಬೇಕು, ಆ ದಿಸೆಯಲ್ಲಿ ಸರ್ಕಾರ ಕಾರ್ಯೋನ್ಮುಖ ಆಗಬೇಕು ಎಂದು ನಾನು ಒತ್ತಾಯ ಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ. ದೇವರಾಜ ಮಾರ್ಕೆಟ್‌ನಲ್ಲಿ ವ್ಯಾಪಾರ ಮಾಡತಕ್ಕ ಜನ ಯಾರಿದ್ದಾರೆ ಆ ಬಾಡಿಗೆದಾರರ ಸಂಘದ ಪದಾಧಿಕಾರಿಗಳು ತುರ್ತಾಗಿ ವ್ಯಾಪಾರಸ್ಥರ ಪರವಾಗಿ ನನಗೆ ಪತ್ರ ಕಳುಹಿಸಿಕೊಟ್ಟಿದ್ದಾರೆ. ಸರ್ಕಾರದ ಪರವಾಗಿ ಮಂತ್ರಿಗಳು ಆ ವ್ಯಾಪಾರಸ್ಥರಿಗೆ ಬೇರೆ ಸ್ಥಳದಲ್ಲಿ ವ್ಯಾಪಾರ ಮಾಡಲಿಕ್ಕೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಆ ವ್ಯಾಪಾರಸ್ಥರು ಬೇರೆ ಕಡೆಯಲ್ಲಿ ವ್ಯಾಪಾರ ಮಾಡಲಿಕ್ಕೆ ನಮಗೆ ಇಚ್ಛೆ ಇಲ್ಲ ನವ ಗೆ ತುರ್ತಾಗಿ ಹೊಸ ಕಟ್ಟಡವನ್ನು ಅತ್ಯಂತ ಶೀಘ್ರದಲ್ಲಿ ಕಟ್ಟುವಂತಹ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಒತ್ತಾಯ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಮತ್ತೊಮ್ಮೆ ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಲ್ಲಿ ಸರ್ಕಾರ ಹಂತಹಂತವಾಗಿ ಒಂದು ಅತ್ಯಾಧುನಿಕ ರೀತಿಯಲ್ಲಿ ಹೊಸ ಮಾರುಕಟ್ಟೆಯನ್ನು ಕಟ್ಟಿಸಿಕೊಡಬೇಕು. ಆ ದಿಸೆಯಲ್ಲಿ ಮೈಸೂರು ನಗರದ ಹತ್ತು ಲಕ್ಷ ಪ್ರಜಾಸಂಖ್ಯೆಗೆ ಸ್ಪಂದಿಸುವ ಕೆಲಸವನ್ನು ಸರ್ಕಾರ ಮಾಡಿಕೊಡಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತಾ, ಈ ಸಂದರ್ಭದಲ್ಲಿ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಸಭಾಧ್ಯಕ್ಷರಿಗೆ ನನ್ನ ಅನಂತ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಪಿ. ವೆಂಕಟೇಶ್.—ಸನ್ಮಾನ್ಯ ಅಧ್ಯಕ್ಷರೆ, ದೇವರಾಜ ಮಾರ್ಕೆಟ್‌ನಲ್ಲಿ ಸಂಭವಿಸಿದ ದುರಂತದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಪರವಾಗಿ ಮಾನ್ಯ ಹಣಕಾಸಿನ ಸಚಿವರು ಹೇಳಿಕೆಯನ್ನು ಓದಿದರು. ಆದರೆ ಪರಿಹಾರ ಎಷ್ಟು ಕೊಟ್ಟಿದ್ದಾರೆಂದು ಹೇಳಿಲ್ಲ; ಪರಿಹಾರ ಒಂದು ಸಾವಿರ ರೂಪಾಯಿ ಮಾತ್ರ ಕೊಟ್ಟಿದ್ದಾರೆ. ಅಲ್ಲಿ ಅರವತ್ತು ಹಣ್ಣಿನ ಅಂಗಡಿಗಳು ಸುಟ್ಟು ಹೋಗಿವೆ ಎಂದು ಹೇಳಿದ್ದಾರೆ. ಅಲ್ಲಿ ವ್ಯಾಪಾರ ಮಾಡತಕ್ಕವರು ಪ್ರತಿದಿವಸ ನೂರಕ್ಕೆ ಹತ್ತು ರೂಪಾಯಿ ಬಡ್ಡಿ ವ್ಯವಹಾರದಲ್ಲಿ ತೆಗೆದುಕೊಂಡು ವಾಪಸ್ಸು ಮಾಡುವವರು ಇದ್ದಾರೆ. ಅವರು ಪ್ರತಿದಿವಸ ಬೆಳಿಗ್ಗೆ ಹತ್ತು ಇಪ್ಪತ್ತು ಸಾವಿರ ರೂಪಾಯಿ ತೆಗೆದುಕೊಂಡು ವ್ಯಾಪಾರ ಮಾಡಿ ಸಂಜೆ ವಾಪಸ್ಸು ಹಣ ಕೊಡಬೇಕು. ಇಂತಹ ಕೂಲಿ ಮಾಡುವವರಿಗೆ ತಕ್ಷಣ ಒಂದು ಸಾವಿರ ರೂಪಾಯಿ ಪರಿಹಾರ ಕೊಟ್ಟಿದ್ದಾರೆ. ಒಂದು ಸಾವಿರ ರೂಪಾಯಿ ಕೊಟ್ಟರೂವುದು ಬಹಳ ಕಡಿಮೆ ಆದ್ದರಿಂದ, ಅವರಿಗೆ ಐದು ಸಾವಿರ ರೂಪಾಯಿ ಕೊಡಬೇಕೆಂದು ಒತ್ತಾಯ ಪಡಿಸುತ್ತೇನೆ. ಅಧ್ಯಕ್ಷರೆ, ಇದರ ಬಗ್ಗೆ ನಾನು ವಿಷಯ ಹೇಳಲಿಕ್ಕೆ ತಾವು ಹೆಚ್ಚು ಅವಕಾಶ ಕೊಡಬೇಕು. ಈಗ ಸರ್ಕಾರದಲ್ಲಿ ಹಣ ಇಲ್ಲ ಎಂದು ಹೇಳಬಾರದು. ಹಿಂದೆ ಮಾನ್ಯ ಗುಂಡೂರಾವ್‌ರವರ ಸರ್ಕಾರ ಇದ್ದಾಗ ೧೫ ದಿವಸಗಳಲ್ಲಿ ಕೂಡಲೇ ಪೈವೇಟ್ ವಿಜಿನ್ಸ್‌ಯವರ ಹಣದಲ್ಲಿಯೇ ಮಾಡಿಸಿಕೊಟ್ಟಿದ್ದು ಉದಾಹರಣೆ ಇದೆ. ಆದ್ದರಿಂದ ಸರ್ಕಾರ ಈ ಬಗ್ಗೆ ಹೆಚ್ಚು ಗಮನಕೊಟ್ಟು ಆ ಜನರಿಗೆ ಹೆಚ್ಚಿನ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಅಧಿಕಾರಿಗಳಿಗೆ ದುರಸ್ತಿ ಮಾಡಿ ಎಂದು ಸೂಚನೆ ಕೊಟ್ಟಿದ್ದಾರೆ. ಅವರಲ್ಲಿ ಮೂರು ಫ್ಲೋರ್ ಮಾಡುತ್ತೇವೆಂದು ಒಬ್ಬರು, ಎರಡು ಫ್ಲೋರ್ ಮಾಡುತ್ತೇವೆಂದು ಒಬ್ಬರು ಹೇಳುತ್ತಿದ್ದಾರೆ. ಹೀಗಾಗಿ ತೊಂದರೆಯಾಗಿದೆ. ಅಲ್ಲಿರುವ ಸಂಘದವರಿಗೆ ಸ್ವಲ್ಪ ಅನುಮಾನ ಉಂಟಾಗಿ ನಾವು ಈ ಜಾಗ ಬಿಡುವುದಿಲ್ಲವೆಂದು ಹೇಳುತ್ತಿದ್ದಾರೆ. ಮತ್ತೆ ನೀವು ವ್ಯಾಪಾರ ಮಾಡಿಕೊಳ್ಳಿ ಎಂದು ಕೆಲವರನ್ನು ಎಕ್ಸಿಬಿಷನ್ ಬಿಲ್ಡಿಂಗಿಗೆ ಕಳಿಸಿಕೊಟ್ಟಿದ್ದಾರೆ, ಅದರಲ್ಲಿ ಅರ್ಧ ಮಾರ್ಕೆಟ್ ಇದೆ. ಇನ್ನು ಅರ್ಧ

ಎಕ್ಸಿಬಿಷನ್‌ಗೆ ಹೋದರೆ ತುಂಬಾ ತೊಂದರೆಯಾಗುತ್ತದೆ. ಇವರು ಕೊಟ್ಟಿರುವುದು ಒಂದು ಸಾವಿರ ರೂಪಾಯಿ. ಮತ್ತೆ ಹತ್ತು ಸಾವಿರ ರೂಪಾಯಿನ ಬಾಳಿಹಣ್ಣು ತೆಗೆದುಕೊಳ್ಳಬೇಕು, ಬೇರೆ ಹಣ್ಣು ತೆಗೆದುಕೊಳ್ಳಬೇಕು. ನೂರಕ್ಕೆ ಹತ್ತು ರೂಪಾಯಿನಂತೆ ಬಡ್ಡಿಗೆ ತೆಗೆದುಕೊಂಡು ಅಲ್ಲಿ ವ್ಯಾಪಾರ ಆಗದೇಹೋದರೆ ಆತನು ಬೇಗ ಪಾಪರ್ ಆಗುತ್ತಾನೆ,ಇದಕ್ಕೆ ತಾವು ದಯವಿಟ್ಟು ಅವಕಾಶ ಕೊಡಬೇಡಿ. ಪಕ್ಕದಲ್ಲಿರುವ ಟೌನ್ ಹಾಲ್‌ನಲ್ಲಿ ಜಾಗ ಇದೆ. ಅಲ್ಲಿ ಎಗ್ಸಿಬಿಷನ್ ಇದೆ. ಅಲ್ಲಿ ಪೈಪ್ ಹಾಕಿ ಜಿಂಕ್‌ಶೀಟ್ ಹಾಕಿ ತಾತ್ಕಾಲಿಕವಾಗಿ ಷೆಡ್ ಹಾಕಿಕೊಟ್ಟರೆ ಅವರು ಅಲ್ಲಿ ವ್ಯಾಪಾರ ಮಾಡುತ್ತಾರೆ. ಅದು ಮಾರ್ಕೆಟ್‌ಗೆ ಹತ್ತಿರ ಆಗುತ್ತದೆ ಬಸ್ ಸ್ಟ್ಯಾಂಡಿಗೆ ಹತ್ತಿರ ಇದೆ. ಅವರು ಅಲ್ಲಿ ವ್ಯಾಪಾರ ಮಾಡುತ್ತಾರೆ. ಅಷ್ಟರಲ್ಲಿ ಇಲ್ಲಿ ದುರಸ್ತಿ ಮಾಡಲಿಕ್ಕೆ ಅನುಕೂಲವಾಗುತ್ತದೆ. ಅಧಿಕಾರಿಗಳು ೨–೩ ಫ್ಲೋರ್ ಕಟ್ಟುತ್ತೇವೆಂದು ಹೇಳುತ್ತಿದ್ದಾರೆ; ನಿಧಾನವಾಗುತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಈ ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ. ಹಿಂದೆ ಮಾನ್ಯ ಗುಂಡೂರಾಯರು ಇಂತಹ ಘಟನೆ ನಡೆದ ಸಂದರ್ಭದಲ್ಲಿ ೧೫ ದಿವಸದಲ್ಲಿ ಟಿಂಪೊರರಿಯಾಗಿ ಷೆಡ್ ಅನ್ನು ಹಾಕಿಕೊಟ್ಟರು. ಈ ದುರ್ಘಟನೆಯಲ್ಲಿ ನೊಂದವರು ಯಾರಿದ್ದಾರೆ ಅವರಿಗೆ ಐದು ಸಾವಿರ ರೂಪಾಯಿ ಪರಿಹಾರ ಧನವನ್ನು ಕೂಡಲೇ ಕೊಡಬೇಕು, ಮತ್ತು ಅವರು ಏನು ತಪ್ಪು ಹಣವನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದಾರೆ ಅಷ್ಟು ಹಣವನ್ನು ಕೊಡ ಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಸ್. ಕಾಳಮರಿಗೌಡ.—ಮಾನ್ಯ ಅಧ್ಯಕ್ಷರೇ, ಅಗ್ನಿ ದುರಂತ ಆಗಿರತಕ್ಕಂಥಾದ್ದು ಮೈಸೂರಿನ ಇತಿಹಾಸದಲ್ಲಿ ಬಹುಶಃ ಇದು ಎರಡನೆಯದಾಗಿರಬಹುದು. ಬಹಳ ಹಿಂದಿನ ಕಾಲದಿಂದಲೂ ದೇವರಾಜ ಮಾರ್ಕೆಟ್ ಅನ್ನತಕ್ಕಂಥಾದ್ದು ತುಂಬಾ ಪ್ರಸಿದ್ಧಿಯಾಗಿರತಕ್ಕಂಥಾದ್ದು. ಈಗ ಏನಾಹುತ ನಡೆದುಹೋಗಿದೆ. ಮಾನ್ಯ ಹಣಕಾಸಿನ ಸಚಿವರು ಅದೇ ದಿವಸ ಅಲ್ಲಿಗೆ ಭೇಟಿ ಮಾಡಿ ಪರಿಹಾರವನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಿದ್ದಾರೆ. ಪೋಲೀಸ್ ಇಲಾಖೆಯವರು ಮಂತ್ರಿ ಬೇರೆ ಇಲಾಖೆಯವರು ಕೂಡ ಆ ದಿವಸ ಸಹಕರಿಸಿ ಬಹಳ ಮಟ್ಟಿಗೆ ಆಗಬಹುದಾದಂತಹ ದುರಂತವನ್ನು ತಪ್ಪಿಸಿದರು. ಅವತ್ತು ಅಲ್ಲಿ ಜನರು ಇದ್ದಿದ್ದರೆ ಎಷ್ಟು ಜನರು ಸಾಯುತ್ತಿದ್ದರೊ ಅದು ಹೇಳುವುದಕ್ಕೆ ಆಗದೇ ಇರತಕ್ಕಂಥಾದು. ಏನೇ ಆಗಲಿ ಇವತ್ತು ದುರಂತ ಆಗಿದೆ. ಅಲ್ಲಿನ ದುರಂತ ದಿಂದ ನೊಂದಂತಹವರಿಗೆ ಹಣವನ್ನು ಸರಕಾರದ ಮುಖಾಂತರವಾಗಿಯೋ ಇಲ್ಲವೇ ಬ್ಯಾಂಕ್‌ವ ಲೂಕ ವಾಗಿಯೋ ಪ್ರೋತ್ಸಾಹ ಕೊಡಬೇಕಾಗುತ್ತದೆ. ಈ ಮೂಲಕ ಹೆಚ್ಚು ಪರಿಹಾರವನ್ನು ಕೊಡಬೇಕೆಂದು ನಾನು ವಿನಂತಿಸುತ್ತೇನೆ. ಈಗ ಇರತಕ್ಕಂತಹ ದೇವರಾಜ ಮಾರ್ಕೆಟನ್ನು ಬದಲಾವಣೆ ಮಾಡಿ ಬೇರೆ ಕಡೆಗೆ ಷಿಫ್ಟ್ ಮಾಡಬೇಕೆಂಬ ಮಾತು ಇದೆ, ಅದನ್ನು ಬದಲಾವಣೆ ಮಾಡುವುದು ಸೂಕ್ತ ಅಲ್ಲ. ತಾತ್ಕಾಲಿಕವಾಗಿ ಬೇರೆ ವ್ಯವಸ್ಥೆ ಮಾಡಿ ದೇವರಾಜ ಮಾರ್ಕೆಟ್ ಅನ್ನು ಸುಸಜ್ಜಿತವಾಗಿ ದುರಸ್ತಿ ಮಾಡಿ ಕೊಡಬೇಕು. ಮುಂದೆ ಇಂತಹ ದುರಂತ ಆಗುವುದಕ್ಕೆ ಅವಕಾಶ ಕೊಡಬಾರದು. ಇವತ್ತಿನ ಒಂದು ಹೊಸ ವಾತಾವರಣದಲ್ಲಿ ಇಂತಹ ದುರಂತ ಇನ್ನು ಮುಂದೆ ಆಗದ ರೀತಿ ವ್ಯವಸ್ಥಿತವಾದಂಥ ಮಾರುಕಟ್ಟೆಯನ್ನು ಅಲ್ಲಿ ಮಾಡಬೇಕು. ಮತ್ತು ನೊಂದಂತಹವರಿಗೆ ಇನ್ನೂ ಹೆಚ್ಚು ಪರಿಹಾರವನ್ನು ಕೊಡಬೇಕೆಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಚಂದ್ರಪ್ರಭಾ ಅರಸ್ (ಹುಣಸೂರು).—ಸನ್ಮಾನ್ಯ ಅಧ್ಯಕ್ಷರೇ, ಮೈಸೂರು ನಗರದ ಮಾರ್ಕೆಟ್‌ನಲ್ಲಿ ಅಗ್ನಿ ದುರಂತ ಏನು ಸಂಭವಿಸಿದೆ. ಹಿಂದೆಯೂ ಕೂಡ ಜನ ದಟ್ಟಣೆ ಹೆಚ್ಚು ಇರುವಂತಹ ಮತ್ತು ಸ್ಥಳಾವಕಾಶ ಕಡಿಮೆ ಇರುವಂತಹ ಕಡೆ ಒತ್ತಡದಿಂದಾಗಿ ಇನ್ನೂ ಅನೇಕ ಕಡೆಗಳಲ್ಲಿ ಇಂತಹ ದುರ್ಘಟನೆಗಳಾಗಿರುವುದನ್ನು ನಾವು ನೋಡುತ್ತಿದ್ದೇವೆ; ಬೆಂಗಳೂರು ಮಾರ್ಕೆಟ್‌ನಲ್ಲೂ ಇನ್ನಿತರ ಮಾರ್ಕೆಟ್ ಪ್ರದೇಶಗಳಲ್ಲಿ ನಡೆದಿರುವುದನ್ನು ನಾವು ನೋಡುತ್ತಿದ್ದೇವೆ. ಇವತ್ತು ಸಂಬಂಧಪಟ್ಟಂತಹ ಮಂತ್ರಿಗಳು ಕೊಟ್ಟಿರತಕ್ಕಂಥ ಹೇಳಿಕೆಯಿಂದ ಇದಕ್ಕೆ ಕಾರಣ ಏನು ಎಂಬುದನ್ನು ಇನ್ನೂ ತಿಳಿದುಕೊಂಡಿಲ್ಲವೆಂದು ಕಾಣುತ್ತದೆ. ಇದರ ಬಗ್ಗೆ ಸರ್ಕಾರಕ್ಕೆ ಇನ್ನೂ ವರದಿ ಬರಬೇಕಾಗಿದೆಯೆಂದು ಅನ್ನಿಸುತ್ತದೆ. ಸುಮಾರು ನೂರಾರು ಅಂಗಡಿಗಳು ಪೂರ್ಣವಾಗಿ ಭಸ್ಮವಾಗಿ, ಅಲ್ಲಿರತಕ್ಕಂತಹ ಅನೇಕ ಲಕ್ಷ ರೂಪಾಯಿ ಬೆಲೆ ಬಾಳುವ ಸಾಮಗ್ರಿಗಳು ನಷ್ಟವಾಗಿದೆ. ಸಂಬಂಧಪಟ್ಟ ಸಚಿವರು ಅಲ್ಲಿಗೆ ಭೇಟಿ ನೀಡಿ ತಾತ್ಕಾಲಿಕ ಪರಿಹಾರವನ್ನು ನೀಡಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಸೂಕ್ಷ್ಮ ಕ್ರಮ ತೆಗೆದುಕೊಂಡು ಸಂರಕ್ಷಣೆ ಮಾಡಿದ್ದಾರೆ ಹಾಗೂ ಇನ್ನೂ ಹೆಚ್ಚಿನ ಅನಾಹುತವಾಗದ ಹಾಗೆ ನೋಡಿಕೊಳ್ಳುವುದಕ್ಕೆ ಪ್ರಯತ್ನಿಸಿದ್ದಾರೆ. ಅದಕ್ಕಾಗಿ ನಮ್ಮೆಲ್ಲರ ಅಭಿನಂದನೆ ಅವರಿಗೆ ಇದೆ. ಆದರೆ ಇದು ಪರಿಪೂರ್ಣವಾದ ಪರಿಹಾರವಾಗುವುದಿಲ್ಲ. ಲಕ್ಷಾಂತರ ರೂಪಾಯಿ ನಷ್ಟವಾಗಿದೆ ಎಂದು ಅವರ ಹೇಳಿಕೆಯಲ್ಲಿದೆ. ಕೇವಲ ಒಂದು ಸಾವಿರ ರೂಪಾಯಿ, ೫೦೦ ರೂಪಾಯಿ ಎರಡು ಸಾವಿರ ರೂಪಾಯಿ ಪರಿಹಾರ ಕೊಡುವುದು ಅವತ್ತಿನ ತಾತ್ಕಾಲಿಕ ಪರಿಹಾರವಾಗುತ್ತದೆಯೇ ವಿನಃ ಅವರ

ಪುನರ್ವ್ಯವಸ್ಥೆಗೆ ಸಾಧ್ಯವಾಗುವುದಿಲ್ಲ ಎನ್ನುವ ಮಾತು ತಮಗಾದರೂ ಮತ್ತು ಅವರಿಗಾದರೂ ಅರ್ಥವಾಗಿರಬೇಕು.

೧೨–೪೦ ಪಿ. ಎಂ.

ನಾವು ಈ ಹಿಂದೆ ನೋಡಿರುವಂತೆ, ಅನೇಕ ಸಂದರ್ಭಗಳಲ್ಲಿ ಷಾರ್ಟ್ ಸರ್ಕ್ಯೂಟ್‌ನಿಂದಾಗಿ ಇಂಥ ಅಗ್ನಿ ಆಕಸ್ಮಿಕಗಳಾಗಿರತಕ್ಕದ್ದೆ ಹೆಚ್ಚು. ಇಷ್ಟಾದರೂ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಪಾತ್ರ ಯಾರ ಕಣ್ಣಿಗೂ ಬೀಳುವುದಿಲ್ಲ. ಏಕೆಂದರೆ, ಇದು ಒಂದು ಬೋರ್ಡ್ ಆಗಿರುವುದರಿಂದ ಇದರ ಮೇಲೆ ಸರ್ಕಾರದ ಹಿಡಿತವಾಗಲಿ, ಮಂತ್ರಿಗಳ ಹಿಡಿತವಾಗಲಿ ನೇರವಾಗಿ ಇಲ್ಲ. ಅಗ್ನಿ ಆಕಸ್ಮಿಕಗಳಿಗೆ ಸಂಬಂಧಪಟ್ಟಂತೆ ಪರಿಶೀಲಿಸಿದರೆ ಇಂಥ ದುರಂತಗಳಲ್ಲೆಲ್ಲ ವಿದ್ಯುಚ್ಛಕ್ತಿ ಮಂಡಲಿಯ ಪಾತ್ರ ಹೆಚ್ಚಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಅಂದರೆ ಇದಕ್ಕೆ ವಿದ್ಯುಚ್ಛಕ್ತಿಯೇ ಕಾರಣ. ಏಕೆಂದರೆ, ವಿದ್ಯುತ್ ಸರಬರಾಜಿಗೆ ಸಂಬಂಧಪಟ್ಟಂತೆ ಸರಿಯಾದ ದುರಸ್ತಿ ಕಾರ್ಯಗಳು ನಡೆಯುತ್ತಿಲ್ಲ. ಒಂದುವೇಳೆ ಯಾರಾದರೂ ದೂರುಗಳನ್ನು ಕೊಟ್ಟರೂ ಕೂಡ ಮಂಡಲಿಯವರು ಹೋಗಿ ಸರಿಯಾಗಿ ರಿಪೇರಿ ಮಾಡಿಬರುವುದಿಲ್ಲ. ನಾವೂ ಕೂಡ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ. ಇದನ್ನು ನಾವೆಲ್ಲರೂ ತಿಳಿದ್ದೇವೆ. ಈ ಮಾರುಕಟ್ಟೆಯಲ್ಲಿ ಸುಮಾರು ೫೦-೬೦ ವರ್ಷಗಳ ಹಿಂದೆ ಅಂಗಡಿಗಳನ್ನು ಇಟ್ಟುಕೊಳ್ಳುವವರಿಗೆ ಸ್ಥಳಾವಕಾಶವನ್ನು ಮಾಡಿಕೊಡಲಾಗಿತ್ತು. ಮೈಸೂರು ಒಂದು ಸುಂದರವಾದ ಪ್ರವಾಸಿ ಕೇಂದ್ರವಾಗಿರುವುದರಿಂದ ಪ್ರತಿದಿನ ಹೆಚ್ಚು ಹೆಚ್ಚು ಜನರು ಅಲ್ಲಿಗೆ ಬರುತ್ತಿರುತ್ತಾರೆ. ಅಲ್ಲಿ ಜನದಟ್ಟಣೆ ಜಾಸ್ತಿಯಾದಾಗ ಮಾರುಕಟ್ಟೆಯೊಳಗೆ ಸ್ಥಳಾವಕಾಶ ಕಡಿಮೆ ಯಾಗುತ್ತದೆ. ಅಲ್ಲದೆ ರಜಾ ದಿನಗಳಲ್ಲಿ ಹೆಚ್ಚಿನ ಜನರು ಅಲ್ಲಿಗೆ ಬರುತ್ತಾರೆ. ಇದು ಬಹಳ ಪ್ರಮುಖವಾದ ಸ್ಥಳವಾದ್ದರಿಂದ ಇಲ್ಲಿ ಉತ್ತಮ ಹಾಗೂ ಅತ್ಯಾಧುನಿಕ ಮಾರುಕಟ್ಟೆಯನ್ನು ನಿರ್ಮಾಣ ಮಾಡಲು ಒಂದು ಮಾಸ್ಟರ್ ಪ್ಲಾನನ್ನು ತಯಾರಿಸಬೇಕು. ಒಂದುವೇಳೆ ಇನ್ನೂ ಉತ್ತಮ ಸ್ಥಳ ಯಾವುದಾದರೂ ಇದ್ದರೆ ಅಲ್ಲಿಗೆ ಬೇಕಾದರೂ ಇದನ್ನು ವರ್ಗಾಯಿಸಬಹುದು. ನಮ್ಮ ಮೈಸೂರು ನಗರ ಬಹಳ ಸುಂದರವಾದ ಪಟ್ಟಣಗಳಲ್ಲಿ ಒಂದಾದ್ದರಿಂದ ಕೇವಲ ದೇಶದ ಪ್ರವಾಸಿಗರೇ ಅಲ್ಲದೆ ವಿದೇಶೀ ಪ್ರವಾಸಿಗರೂ ಅಲ್ಲಿಗೆ ಬರುತ್ತಿರುತ್ತಾರೆ. ಎಲ್ಲ ಪ್ರವಾಸಿಗರನ್ನೂ ಸೆಳೆಯತಕ್ಕ ಒಂದು ಪ್ರವಾಸಿ ಕೇಂದ್ರ ಇದಾಗಿದೆ. ಆದ್ದರಿಂದ ಆದಷ್ಟು ಬೇಗ ಈ ಮಾರುಕಟ್ಟೆಯನ್ನು ಆಧುನಿಕ ರೀತಿಯಲ್ಲಿ ನವೀಕರಣ ಮಾಡಲು ಒಂದು ಮಾಸ್ಟರ್ ಪ್ಲಾನ್‌ನ್ನು ತಯಾರು ಮಾಡಿ ಅದನ್ನು ಎರಡು ವರ್ಷ, ಮೂರು ವರ್ಷ ಅಥವಾ ನಾಲ್ಕು ವರ್ಷಗಳಲ್ಲಿ ಪೂರ್ಣಗೊಳಿಸತಕ್ಕಂಥ ತೀರ್ಮಾನವನ್ನು ಸಾಧ್ಯವಾದರೆ ಸರ್ಕಾರ ತೆಗೆದುಕೊಳ್ಳಬೇಕು ಎಂದು ಸದನದ ಮೂಲಕ ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿ ಉತ್ತಮ ಮಾರುಕಟ್ಟೆ ನಿರ್ಮಾಣ ಅತ್ಯವಶ್ಯಕವಾಗಿದೆ. ಈಗ ಮಾನ್ಯ ಆರ್ಥಿಕ ಮಂತ್ರಿಗಳು ತಮ್ಮ ಉದಾರ ನೀತಿಯಿಂದ ನಷ್ಟಕ್ಕೊಳಗಾದವರಿಗೆ ಏನು ತಾತ್ಕಾಲಿಕ ಪರಿಹಾರವನ್ನು ಕೊಟ್ಟಿದ್ದಾರೆ ಇದು ಸಾಲದು, ಇನ್ನೂ ಶಾಶ್ವತವಾದ ಪರಿಹಾರ ದೊರಕಿಸಿಕೊಡುವುದಕ್ಕೆ ಪ್ರಯತ್ನ ಮಾಡಿ ಇನ್ನೂ ಹೆಚ್ಚಿನ ಹಣ ಸಹಾಯವನ್ನು ಒದಗಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಅವರಲ್ಲಿ ಪ್ರಾರ್ಥಿಸುತ್ತೇನೆ.

† ಶ್ರೀ ಕೆ. ಎಂ. ಸೋಮಸುಂದರಂ (ಕೃಷ್ಣರಾಜ).—ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತು ಮೈಸೂರು ನಗರದಲ್ಲಿ ಏನು ಬೆಂಕಿ ದುರಂತ ಆಗಿದೆ ಇದು ಎರಡನೇ ಸಾರಿ ಆಗಿರತಕ್ಕದ್ದು. ಈ ಬೆಂಕಿ ದುರಂತದ ಬಗ್ಗೆ ಕೆಲವು ಮಿತ್ರರು ಮಾತನಾಡಿದ್ದಾರೆ. ಆದರೆ ನಾನು ಒಂದು ಮಾತನ್ನು ಮಾತ್ರ ಹೇಳುತ್ತೇನೆ, ಈ ಮಾರುಕಟ್ಟೆ ಪ್ರದೇಶ ಏನಿದೆ ಇದು ಮೈಸೂರು ನಗರಸಭೆಗೆ ಸೇರಿದ ಆಸ್ತಿ. ಇದು ಒಂದು ರೀತಿಯಲ್ಲಿ ಚಿನ್ನದ ಗಣಿ ಎಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ. ಇದರಲ್ಲಿ ನೂರಾರು ಮಳಿಗೆಗಳಿವೆ. ಈ ಮಳಿಗೆಗಳನ್ನು ಕಡಿಮೆ ಬಾಡಿಗೆಗೆ ಕೊಟ್ಟು ಸುಮಾರು ೪೦–೫೦ ವರ್ಷಗಳಿಂದಲೂ ಕೂಡ ಆ ಮಾರುಕಟ್ಟೆ ನಡೆದುಕೊಂಡು ಬರುತ್ತಿದೆ. ಸಾವಿರಾರು ರೂಪಾಯಿಗಳ ವರಮಾನ ನಗರಸಭೆಗೆ ಇದರಿಂದ ಬರುತ್ತದೆ. ಈ ಮಾರುಕಟ್ಟೆ ನಗರದ ಮಧ್ಯಭಾಗದಲ್ಲಿ ಬಹಳ ಶೋಭಾಯಮಾನವಾಗಿದೆ. ಸರ್ಕಾರಕ್ಕೆ ನನ್ನ ಒಂದು ಸಲಹೆ ಏನೆಂದರೆ, ಈ ಮಾರುಕಟ್ಟೆ ಇರತಕ್ಕ ಜಾಗದಲ್ಲಿ ಒಂದು ಅತ್ಯಾಧುನಿಕ ಮಾರುಕಟ್ಟೆಯನ್ನು ಕಟ್ಟಿದಪಕ್ಷದಲ್ಲಿ ೪೦೦–೫೦೦ ಮಳಿಗೆಗಳನ್ನು ವ್ಯವಸ್ಥೆ ಮಾಡಿ ಬಾಡಿಗೆಗೆ ಕೊಟ್ಟರೆ ಒಂದು ತಿಂಗಳಿಗೆ ಸುಮಾರು ೮–೧೦ ಲಕ್ಷ ರೂಪಾಯಿ ನಗರಸಭೆಗೆ ವರಮಾನ ಬರುತ್ತದೆ. ಇದು ತಮಗೂ ಗೊತ್ತಿದೆ. ತಾವೂ ಕೂಡ ಮೈಸೂರು ನಗರದಲ್ಲಿ ವ್ಯಾಸಂಗವನ್ನು ಮಾಡಿದ್ದೀರಿ. ಆ ಕಾಲದಲ್ಲಿ ತಾವು ಏನೊಂದು ಸೊಬಗನ್ನು ಕಂಡಿದ್ದೀರಿ. ಆ ಸೊಬಗು ಇವತ್ತು ಆ ಪ್ರದೇಶದಲ್ಲಿಲ್ಲ. ಆ ಹಿಂದಿನ ಸೊಬಗನ್ನು ಮತ್ತೆ ನಾವು ಕಾಣಬೇಕಾದರೆ ನವೀಕರಣವಾದಂಥ ಮಾರ್ಕೆಟ್‌ನ್ನು ನಿರ್ಮಾಣ ಮಾಡಬೇಕು.

ಬೆಂಕಿ ದುರಂತದಿಂದ ಇವತ್ತು ಹಣ್ಣಿನ ಸ್ಟಾಲ್ ಮತ್ತು ಬಾಳೆ ಹಣ್ಣಿನ ಸ್ಟಾಲ್ ಎರಡೂ ಕೂಡ ಸಂಪೂರ್ಣವಾಗಿ ಏನೂ ನಾಶವಾಗಿ ಹೋಗಿವೆ ಆದರಲ್ಲಿ ನಾಲ್ಕು ಭಾಗವನ್ನು ಮಾಡಿ ತನ್ಮೂಲಕ ನಾಲ್ಕು ಏಜೆನ್ಸಿಗಳಿಗೆ ವಹಿಸಿ ಸುಮಾರು ೪೦೦-೫೦೦ ಮಳಿಗೆಗಳನ್ನು ಕಟ್ಟತಕ್ಕಂಥ ಒಂದು ವ್ಯವಸ್ಥೆ ಮಾಡಿದರೆ ನಮ್ಮ ಕಾರ್ಪೊರೇಷನ್‌ಗೆ ಕ್ಷಿಪ್ರಗತಿಯಲ್ಲಿ ಸುಮಾರು ೮-೧೦ ಲಕ್ಷ ರೂಪಾಯಿಗಳು ಪ್ರತಿ ತಿಂಗಳೂ ಆದಾಯ ಬರುತ್ತದೆ. ಈ ೨೦೦ ಜನ ಏನು ಮಳಿಗೆಗಳನ್ನು ಕಳೆದುಕೊಂಡಿದ್ದಾರೆ, ಅವರಿಗೆ ಸುಲಭ ದರದಲ್ಲಿ ಅಂದರೆ ಈಗ ಕೊಡತಕ್ಕಂಥ ಬಾಡಿಗೆಯ ಎರಡು-ಮೂರು ಪಟ್ಟು ಬಾಡಿಗೆ ಹೆಚ್ಚು ಮಾಡಿ ಉಳಿದಂಥ ಮಳಿಗೆಗಳನ್ನು ಹರಾಜು ಮೂಲಕ ಕೊಟ್ಟರೆ ಒಂದು ತಿಂಗಳಿಗೆ ೧೦ ಲಕ್ಷದಂತೆ ಒಂದು ವರ್ಷಕ್ಕೆ ೧.೨೦ ಕೋಟಿ ರೂಪಾಯಿ ನಮ್ಮ ಕಾರ್ಪೊರೇಷನ್‌ಗೆ ಆದಾಯ ಬರುತ್ತದೆ. ಈ ದೃಷ್ಟಿಯಿಂದ ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ಆರ್ಥಿಕ ಸಚಿವರ ಜೊತೆ ಸಮಾಲೋಚನೆ ಮಾಡಿ ಮಾರುಕಟ್ಟೆಯ ಆಧುನೀಕರಣ ಕಾರ್ಯವನ್ನು ಕೂಡಲೇ ಕೈಗೆತ್ತಿಗೊಂಡು ನಮ್ಮ ಮೈಸೂರು ನಗರದ ಸೌಂದರ್ಯವನ್ನು ಕಾಪಾಡಬೇಕೆಂದು ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಕೆ. ಸಿದ್ದಯ್ಯ (ಸಂತೇಮಾರನಹಳ್ಳಿ).—ಮಾನ್ಯ ಅಧ್ಯಕ್ಷರೇ, ಮೈಸೂರು ದೇವರಾಜ ಮಾರ್ಕೆಟ್ ಅಗ್ನಿ ಅಪಘಾತಕ್ಕೆ ತುತ್ತಾಗಿರುವ ಬಗ್ಗೆ ಅನೇಕ ಮಾನ್ಯ ಸದಸ್ಯರು ತಿಳಿಸಿದ್ದಾರೆ, ತಾವು ಇದಕ್ಕೆ ಕಾರಣವೇನು, ಏತಕ್ಕೋಸ್ಕರವಾಗಿ ಇಷ್ಟು ನಷ್ಟವಾಯಿತು ಎನ್ನುವ ವಿಚಾರಕುರಿತು ತಿಳಿಯುವ ಸಲುವಾಗಿ ಒಂದು ಸಮಿತಿಯನ್ನು ಈಗಾಗಲೇ ನೇಮಕ ಮಾಡಿದ್ದೇವೆ, ಅದರಿಂದ ತಿಳಿದು ಬರುತ್ತದೆ ಎಂದು ತಾವು ಹೇಳಿದ್ದೀರಿ. ಇದು ಎಲೆಕ್ಟ್ರಿಸಿಟಿ ಶಾರ್ಟ್ ಸರ್ಕ್ಯೂಟ್‌ನಿಂದ ಆಗಿದೆ ಎಂದು ಹೇಳುತಾರೆ. ಯಾವ ಕಾರಣದಿಂದ ಆಯಿತು ಎಂಬ ವಿಷಯ ಬಹುಶಃ ಇನ್‌ವೆಸ್ಟಿಗೇಷನ್ ಆದಮೇಲೆ ಗೊತ್ತಾಗುತ್ತದೆ. ಅದಕ್ಕೆ ತಕ್ಕಂಥ ಪ್ರಿವೆಂಟೀವ್ ಮೆಷರ್ಸನ್ನು ತಾವು ಸರ್ಕಾರದವರು ತೆಗೆದುಕೊಳ್ಳುತ್ತೀರಿ ಎಂದು ನಾನು ನಂಬಿದ್ದೇನೆ. ತಾವು ಹೇಳಿದ ಹಾಗೆ ಈ ಮಾರ್ಕೆಟ್ ಮೈಸೂರು ಸಿಟಿಯಲ್ಲಿ ಇರುವುದರಿಂದ ಬಹಳ ಒತ್ತಡದಿಂದ ಕೂಡಿದೆ. ಇದನ್ನು ಆಧುನೀಕರಣ ಮಾಡತಕ್ಕಂಥಾದ್ದು ಬಹಳ ಅವಶ್ಯಕತೆ ಇದೆ. ಈ ಮಾರುಕಟ್ಟೆಯನ್ನು ಜಾಗ್ರತೆ ಚೆನ್ನಾಗಿ ಮಾಡಿದರೆ ಜನರಿಗೆ ಬಹಳ ಅನುಕೂಲವಾಗುತ್ತದೆ ಮತ್ತು ಇದರಿಂದ ಮಹಾನಗರ ಪಾಲಿಕೆಗೂ ಸಹ ಕಾರ್ಪೊರೇಷನ್‌ಗೂ ಬರತಕ್ಕಂಥ ಸಂಪತ್ತು ಇದೆ. ಆದುದರಿಂದ ಇದರ ಆಧುನೀಕರಣವೂ ಸಹ ಮುಖ್ಯ. ಈ ಮಾರ್ಕೆಟ್‌ನ್ನು ಹೊಸದಾಗಿ ಮಾಡಿ ಕೊಟ್ಟರೆ ಸಾರ್ವಜನಿಕರಿಗೆ ಅನುಕೂಲವೂ ಆಗುತ್ತದೆ. ಈ ಮಾರ್ಕೆಟ್ ಇನ್ನೂ ಚೆನ್ನಾಗಿ ಆಗುತ್ತದೆ. ಈ ದೃಷ್ಟಿಯಿಂದ ಸರ್ಕಾರದವರು ಇದರ ಬಗ್ಗೆ ಗಮನಹರಿಸಿ ಶೀಘ್ರವಾಗಿ ಕೆಲಸ ಮಾಡಿಕೊಟ್ಟರೆ ಬಹಳ ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ಅಗ್ನಿ ಅಪಘಾತದಿಂದ ನೊಂದ ಜನರಿಗೆ ಕಾಂಪನ್‌ಸೇಷನ್ ಕೊಡುವ ವಿಚಾರದಲ್ಲಿ ಸರ್ಕಾರದವರು ಒಂದು ರೀಜನಬಲ್ ಆಗಿ ಆದನ್ನು ನೋಡಿ ತಾವು ಕೊಡುತ್ತೀರಿ ಎಂದು ನಾನು ನಂಬಿಕೊಂಡಿದೆ ನೆ. ತಾವು ಕಷ್ಟದಲ್ಲಿ ಸಿಲುಕಿರುವ ಜನರಿಗೆ ಬೇಗ ಪರಿಹಾರವನ್ನು ಒದಗಿಸಿಕೊಡುತ್ತೀರಿ ಎಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಾಟಾಳ್ ನಾಗರಾಜ್.—ಮಾನ್ಯ ಸಚಿವರ ಗಮನಕ್ಕೆ ಒಂದು ವಿಚಾರವನ್ನು ತರುತ್ತೇನೆ. ತಾವು ಹಿಂದೂ ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡುವುದಾಗಿ ಘೋಷಿಸಿರುತ್ತೀರಿ. ಆ ಒಂದು ಸಾವಿರ ರೂಪಾಯಿಗಳ ಪರಿಹಾರ ಇನ್ನೂ ಆ ಜನರಿಗೆ ತಲುಪಿಲ್ಲ. ನಿಜವಾಗಿಯೂ ಯಾರು ತೊಂದರೆಗೆ ಒಳಗಾಗಿರುತ್ತಾರೋ ಅವರಿಗೆ ಹಣ ತಲುಪುವಂತೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಜಿ. ರಾಜಗೌಡ.—(ಹಾನೂರು)—ಮಾನ್ಯ ಅಧ್ಯಕ್ಷರೇ, ಮೈಸೂರು ದೇವರಾಜ ಮಾರ್ಕೆಟ್‌ಗೆ ಅಗ್ನಿ ಸ್ಪರ್ಷವಾಗುತ್ತಿರುವುದು ಇದು ಎರಡನೇ ಬಾರಿ. ೧೯೮೦ನೇ ಇಸವಿಯಲ್ಲಿ ಅಗ್ನಿ ದುರಂತ ಸಂಭವಿಸಿತ್ತು. ಆಗ ಸಕಾಲಿಕವಾಗಿ ಎಚ್ಚೆತ್ತು ಬಹುಶಃ ಮುಂದೆ ಅಗ್ನಿಸ್ಪರ್ಷವಾಗದಂತೆ ಕೆಲಸವನ್ನು ಮಾಡಬಹುದಾಗಿತ್ತು. ದೂರದೃಷ್ಟಿಯಿಂದ ಆ ಕೆಲಸವನ್ನು ಮಾಡುವುದಕ್ಕೆ ಆಗಲಿಲ್ಲ, ಅದಕ್ಕೆ ಕಾರಣ ಗೊತ್ತಿಲ್ಲ. ನಿರ್ದಿಷ್ಟವಾಗಿ ಯಾವ ಕಾರಣದಿಂದ ಅಗ್ನಿಸ್ಪರ್ಷವಾಯಿತು ಎನ್ನುವುದನ್ನು ಸರ್ಕಾರ ಪತ್ತೆಹಚ್ಚಲು ಸಾಧ್ಯವಾಗದಿರುವುದು ಬಹಳ ವಿಷಾದಕರ ಸಂಗತಿಯಾಗಿದೆ. ಸುಮಾರು ೫೦ ವರ್ಷಗಳ ಹಿಂದೆ ಯಾವ ರೀತಿ ಇತ್ತೋ ಅದೇ ರೀತಿಯಲ್ಲಿ ಇವತ್ತೂ ಕೂಡ ಇದೆ. ಅಲ್ಲಿ ಜನಸಂದಣಿ ಬಹಳ ಜಾಸ್ತಿಯಾಗಿದೆ. ಅಲ್ಲಿ ವ್ಯಾಪಾರ ಮಳಿಗೆಗಳು ಜಾಸ್ತಿ ಇದೆ. ಆವನ್ನು ವಿಸ್ತರಿಸಲಿಕೆ ಸಾಕಷ್ಟು ಸ್ಥಳಾವಕಾಶ ಸುತ್ತ ಇಲ್ಲ. ನನ್ನ ಅಭಿಪ್ರಾಯದಂತೆ ಸರ್ಕಾರಕ್ಕೆ ಹೇಳುವುದಾದರೆ, ದಯವಿಟ್ಟು ಇಡೀ ಮಾರ್ಕೆಟ್‌ನ್ನು ಬೇರೆ ಕಡೆಗೆ ಸ್ಥಳಾಂತರಿಸಿದರೆ ಒಳ್ಳೆಯದೆಂದು ಹೇಳುತ್ತೇನೆ. ಬಹುಶಃ ಮಾನ್ಯ ಹಣಕಾಸಿನ ಸಚಿವರು ಅಂದು ಆಸ್ಪತ್ರೆಯೇ ಇದ್ದುದರಿಂದ ಸರ್ಕಾರದ ಎಲ್ಲ ಇಲಾಖೆಗಳವರು ಸಜ್ಜಾಗಿ

ಆದರೆ ಪೋಲೀಸ್ ಇಲಾಖೆ ಮತ್ತು ಅಗ್ನಿಶಾಮಕ ದಳದವರು ಎಲ್ಲರೂ ಕೂಡಿ ಸಜ್ಜಾಗಿ ಒಟ್ಟಿಗೆ ಬಂದು ಅವರ ನೇತೃತ್ವದಲ್ಲಿ ಇನ್ನೂ ಹೆಚ್ಚಿಗೆ ಆಗತಕ್ಕಂಥ ದುರಂತವನ್ನು ತಪ್ಪಿಸುವ ವ್ಯವಸ್ಥೆಯನ್ನು ಮಾಡಿದ್ದಕ್ಕೆ ಮಾನ್ಯ ಸಚಿವರಿಗೆ ಅಭಿನಂದಿಸುತ್ತೇನೆ.

ಅಗ್ನಿಸ್ಪರ್ಷ ಅಪಘಾತದಿಂದ ಅಲ್ಲಿ ನಡೆಯುತ್ತಿದ್ದ ವ್ಯಾಪಾರ ವಹಿವಾಟು ಸ್ಥಗಿತಗೊಂಡಿದೆ. ಆ ಜನರ ಜೀವನ ವಹಿವಾಟು ನಿಂತಿದೆ. ದಯವಿಟ್ಟು ತಕ್ಷಣ ಬೇರೆ ಕಡೆ ವ್ಯವಸ್ಥೆಯನ್ನು ಮಾಡಿ, ಮತ್ತೇ ಅವರು ಮಾರಾಟದಿಂದ ಜೀವನವನ್ನು ಏನು ಮಾಡುತ್ತಿದ್ದರೋ ಅದು ಸ್ಥಗಿತವಾಗದ ರೀತಿಯಲ್ಲಿ ನಡೆಸಿಕೊಂಡು ಹೋಗಲು ಅನುಕೂಲವಾಗುವಂತೆ ವ್ಯವಸ್ಥೆಯನ್ನು. ಕೇವಲ ಒಂದು ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡುತ್ತೇವೆಂದು ಹೇಳಿದರೆ ಅದು ಏನೂ ಸಾಧ್ಯವಾಗುವುದಿಲ್ಲ. ಅದನ್ನು ಇನ್ನೂ ಹೆಚ್ಚಿಸಬೇಕು. ಈ ಮಾರ್ಕೆಟನ್ನು ಅಲ್ಲಿ ಪುನರ್ ನಿರ್ಮಾಣ ಮಾಡುವಂತಹ ಕೆಲಸವನ್ನು ತಾವು ಕೈಬಿಟ್ಟು ಅದನ್ನು ಬೇರೆ ವಿಶಾಲವಾದಂಥ ಕಡೆಗೆ ಸ್ಥಳಾಂತರಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಈ ಮಾರುಕಟ್ಟೆಯನ್ನು ಮೈಸೂರು ಜನಸಂಖ್ಯೆಗೆ ಅನುಗುಣವಾಗಿ ಬೇರೆ ಕಡೆಗೆ ಸ್ಥಳಾಂತರಿಸಬೇಕೆಂದು ಇನ್ನೂ ೩೦ ವರ್ಷಗಳ ದೂರದೃಷ್ಟಿ ಇಟ್ಟುಕೊಂಡು ಹೊಸ ನಮೂನೆ ಪ್ರಕಾರವಾಗಿ ನಿರ್ಮಾಣ ಮಾಡತಕ್ಕಂಥಾದ್ದು ಸೂಕ್ತವೆಂದು ಹೇಳಿ, ಮಾನ್ಯ ಸಚಿವರು ಈ ಬಗ್ಗೆ ಗಮನಹರಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ.—ಮಾನ್ಯ ಅಧ್ಯಕ್ಷರೇ, ಈಗ ಮಾತನಾಡಿದಂಥ ಅನೇಕ ಮಾನ್ಯ ಸದಸ್ಯರು ಪರಿಹಾರವನ್ನು ಕೊಡುವ ಬಗ್ಗೆ ಒತ್ತಾಯ ಮಾಡಿದ್ದಾರೆ. ನಾನು ಆ ದಿವಸವೇ ತಲಾ ಒಂದು ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡುತ್ತೇವೆಂದು ಹೇಳಿದೆ. ಒಂದು ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡತಕ್ಕಂಥದ್ದು ಸರಿಹೋಗುವುದಿಲ್ಲ. ಕೆಲವರಿಗೆ ಕಡಿಮೆ ನಷ್ಟವಾಗಿದೆ, ಕೆಲವರಿಗೆ ಜಾಸ್ತಿ ನಷ್ಟವಾಗಿದೆ ಎಂದು ಹೇಳಿದರು. ಆ ಕಾರಣಕ್ಕಾಗಿಯೇ ಎರಡೂವರೆ ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಅದು ಡೆಪ್ಯೂಟಿ ಕಮೀಷನರ್‌ಗೆ ಹೋಗಿದೆ. ಮತ್ತೆ ಎರಡು ದಿವಸ ಬಿಟ್ಟುಕೊಂಡು ಅದೇ ಸ್ಥಳಕ್ಕೆ ಹೋದಾಗ ಅವರು ಇದು ಸಾಲುವುದಿಲ್ಲ ಮತ್ತೆ ಏನಾದರೂ ಸ್ವಲ್ಪ ಸಹಾಯ ಮಾಡಿ ಎಂದು ಹೇಳಿದರು. ವಿಕ್ರಾಂತ್ ಟೈರ್ ಫ್ಯಾಕ್ಟರಿಯವರು ಇದಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟರು. ಈ ಮೂರುವರೆ ಲಕ್ಷ ರೂಪಾಯಿಗಳನ್ನು ನಷ್ಟ ಹೊಂದಿದವರಿಗೆ ನಾವು ಕೊಡುತ್ತಾ ಇದ್ದೇವೆ. ನಾನು ಆಗಲೇ ತೆಗೆದುಕೊಳ್ಳಿ ಎಂದು ಹೇಳಿದೆ. ಅದಕ್ಕೆ ಅವರು, ನೀವು ಸರ್ಕಾರದವರು ಇಷ್ಟು ಉದಾರವಾಗಿ ಕೊಟ್ಟಿದ್ದೀರಿ ನೀವೇ ಬರಬೇಕು, ನಮಗೆ ಕೊಡಬೇಕೆಂದು ಹೇಳಿದರು. ಅದಕ್ಕೆ ನಾನು ಹೇಳಿದೆ, ೨೬ನೇ ತಾರೀಖು ನಾನು ಮೈಸೂರಿಗೆ ಬರುತ್ತಿದ್ದೇನೆ. ನೀವು ಅಲ್ಲಿಯತನಕ ಕಾಯುವುದಾದರೆ ಆಗ ಬಹುದು ಎಂದು ಹೇಳಿದೆ. ಬಹಳ ಸಂತೋಷದಿಂದ ಕಾಯುತ್ತೇವೆ. ೨೬ನೇ ತಾರೀಖು ನಮಗೆ ಕೊಡಿ, ಈಗ ಏನೂ ಆರ್ಜಂಟಿಲ್ಲ ಎಂದ ಹೇಳಿದರು. ಅದಕ್ಕೋಸ್ಕರ ೨೬ನೇ ತಾರೀಖು ಅದರ ಡಿಸ್ಟ್ರಿಬ್ಯೂಷನ್ ವ್ಯವಸ್ಥೆ ನಾವು ಏರ್ಪಾಟು ಮಾಡಿದ್ದೇವೆ.

ಎರಡನೆಯದ್ದು, ಇವರಿಗೆ ಬೇರೆ ಕಡೆ ತಾತ್ಕಾಲಿಕವಾಗಿ ಏನಾದರೂ ಏರ್ಪಾಡು ಮಾಡಬೇಕೆಂದು ಹೇಳಿದರು. ಆ ವಿಚಾರವನ್ನು ನಾವು ಅವರ ಜೊತೆ ಚರ್ಚೆ ಮಾಡಿದವು. ಅವರಿಗೆ ಬೇರೆ ಕಡೆ ಹೋಗುತ್ತೀರಾ, ನಾವು ತಾತ್ಕಾಲಿಕವಾಗಿ ಷೆಡ್ ಹಾಕಿಕೊಡುತ್ತೇವೆ ಟೌನ್ ಹಾಲ್ ಹತ್ತಿರ ಬೇಕಾದರೆ ಹಾಕಿಕೊಡುತ್ತೇವೆ, ಎಗ್ಸಿಬಿಷನ್ ಬಿಲ್ಡಿಂಗಿಗೆ ಬೇಕಾದರೆ ಹೋಗಬಹುದು ಎಂದು ಹೇಳಿದ್ದೇವೆ. ಅವರು ನಮಗೆ ಟೆಂಪೊರರಿ ಅರೇಂಜ್‌ಮೆಂಟ್ ಏನೂ ಬೇಕಾಗಿಲ್ಲ ಇಲ್ಲೇ ನೀವು ಹಂತ ಹಂತವಾಗಿ ಕೆಲಸ ಕಾರ್ಯಗಳನ್ನು ಕೈಗೊಂಡರೆ ಇದೇ ಸ್ಥಳದಲ್ಲಿ ನಾವು ಮಾಡಿಕೊಂಡು ಹೋಗುತ್ತೇವೆಂದು ಹೇಳಿದರು. ಅದಕ್ಕೆ ಅಸೋಷಿಯೇಷನ್‌ನವರು ಕೂಡ ಒಪ್ಪಿಕೊಂಡಿದ್ದಾರೆ. ಅದರ ಬಗ್ಗೆ ನಾವು ಒಂದು ಆರ್ಡರು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಮತ್ತೆ ಮಾನ್ಯ ರಾಜುಗೌಡರು ಪುನರ್ ನಿರ್ಮಾಣ ಮಾಡುವುದಕ್ಕೆ ಹೋಗಬೇಡಿ ಹೊಸದಾಗಿ ಮಾಡಿ ಎಂದು ಹೇಳಿದರು. It is not reconstruction. It is a construction of new stall as against old one. ಅದಕ್ಕೆ ನಾವು ಸುಮಾರು ೪೫ ಲಕ್ಷ ರೂಪಾಯಿಗಳ ಯೋಜನೆಯನ್ನು ಹಾಕಿದ್ದೇವೆ. ಅದನ್ನು ಹಂತಹಂತವಾಗಿ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ. ಈಗಾಗಲೆ ಅದರ ಕೆಲಸ ಪ್ರಾರಂಭವಾಗಿದೆ. ಆ ಕೆಲಸವನ್ನು ನಾವು ಮೈಸೂರು ಕನ್‌ಸ್ಟ್ರಕ್ಷನ್ ಕಂಪನಿಯವರಿಗೆ ಕೊಟ್ಟಿದ್ದೇವೆ. ಅವರು ಈಗಾಗಲೆ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ ಆದಷ್ಟು ಜಾಗ್ರತೆ ಅದನ್ನು ಪೂರ್ಣಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆಗಾಗ್ಗೆ ಇಂಥ ದುರಂತಗಳು ಸಂಭವಿಸುತ್ತಿರುತ್ತವೆ, ಅದನ್ನು ತಪ್ಪಿಸುವುದಕ್ಕೆ ಏನು ಮಾಡುತ್ತೀರಿ ಎಂದು ಕೇಳಿದ್ದಾರೆ. ೧೯೮೧ರಲ್ಲಿ ಒಂದು ಸಾರಿ ಆಗಿತ್ತು, ಮತ್ತೆ ಈಗ ಒಂದು ಸಾರಿ ಆಗಿದೆ. ಫೈರ್

ಆಕ್ಸಿಡೆಂಟ್ ಆದಾಗ ಫೈರ್ ಹೈರೌಂಡ್ಸ್ ಇರಬೇಕಾಗುತ್ತದೆ. ಅಲ್ಲಿ ಹೈರೌಂಡ್ಸ್ ಇದ್ದರೆ ನೀರನ್ನು ತೆಗೆದಂಕೊಂಡು ಬೆಂಕಿಯನ್ನು ಅತಿ ಶೀಘ್ರದಲ್ಲಿ ಶಮನ ಮಾಡಬಹುದು, ಅದು ಇರಲಿಲ್ಲ. ಈಗ ಫೈರ ಹೈಕ್ಲಾಂಡ್ಸ್ ಮಾಡುವುದರ ಜೊತೆಗೆ ಓವರ್‌ಹೆಡ್ ಟ್ಯಾಂಕನ್ನು ಕಟ್ಟುತಕ್ಕ ಕೆಲಸವು ಆಗ ಬೇಕೆಂದು ವ್ಯವಸ್ಥೆ ಮಾಡುತ್ತಿದ್ದೇವೆ. ಬಹಳ ಹಿಂದೆ ಅಲ್ಲಿ ಏನು ಎಲೆಕ್ಟ್ರಿಕ್ ವೈರಿಂಗ್ ಮಾಡಿದ್ದರಂ ಅದು ಮೇಲ್ಬಾಗದಲ್ಲಿ ಮಾಡಿರತಕ್ಕದ್ದು, ಕೆ. ಇ. ಬಿ. ಯವರ ಜೊತೆಯಲ್ಲಿ ಚರ್ಚೆಮಾಡಿ ಅವರು ಅಂಡರ್ ಗ್ರೌಂಡ್ ಕೇಬಲನ್ನು ಹಾಕಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಅವರು ಕೂಡ ಕೆಲಸ ಪ್ರಾರಂಭ ಮಾಡುತ್ತಾರೆ. ಏಕಕಾಲದಲ್ಲಿ ಕೆಲಸಗಳನ್ನು ಪ್ರಾರಂಭ ಮಾಡುತ್ತೇವೆ. ಆದಷ್ಟು ಜಾಗ್ರತೆ ಈ ಕೆಲಸಕಾರ್ಯಗಳನ್ನು ಪೂರ್ಣ ಮಾಡುತ್ತೇವೆ. ಮುಂದೆ ಇಂಥ ದುರಂತ ಆಗಬಾರದು ಎಂಬುದು ನಮ್ಮ ಅಭಿಲಾಷೆ ಕಾರ್ಪೊರೇಷನ್ನಿಗೆ ಅರೂವರೆ ಲಕ್ಷ ರೂಪಾಯಿ ಏನು ಹಾನಿಯಾಗಿದೆ ಅದಕ್ಕೆ ಇನ್‌ಶ್ಯೂರೆನ್ಸ್ ಮಾಡಿಸಿದ್ದರೆ ಒಳ್ಳೆಯದಿತ್ತು. ಇನ್‌ಶ್ಯೂರೆನ್ಸ್ ಮಾಡಿಸಿ ಕೊಳ್ಳಬೇಕೆಂದು ಡೈರೆಕ್ಷನ್ ಕೊಟ್ಟಿದ್ದೇನೆ. ಇದೇ ತಿಂಗಳ ೨೬ನೇ ತಾರೀಖು ಪರಿಹಾರ ಕೊಡುತ್ತೇವೆ, ಮತ್ತು ಆದಷ್ಟು ಜಾಗ್ರತೆ ಕೆಲಸ ಕಾರ್ಯಗಳನ್ನು ಮುಗಿಸುತ್ತೇವೆಂದು ಹೇಳಿ ನನ್ನ ಮಾತು ಮುಂಗಿಸುತ್ತೇನೆ.

ii) ಬೆಂಗಳೂರಿನ ರಾಜಾಮಿಲ್‌ನಲ್ಲಿ ಸಂಭವಿಸಿದ ಅಗ್ನಿ ಅನಾಹುತದ ಬಗ್ಗೆ

ಶ್ರೀ ಎಸ್. ರಮೇಶ್ (ಉತ್ತರಹಳ್ಳಿ),—ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಬೆಂಗಳೂರು ನಗರದ ರಾಜಾ ಮಿಲ್‌ನಲ್ಲಿ ಸಂಭವಿಸಿದ ಅಗ್ನಿ ದುರಂತದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

SRI M. RAJASHEKAR MURTHY (Minister for Finance).—Mr.Speaker Sir, With your permission I wish to make the following.—

At about 7-30 p: m· on 18-1-1990

ಶ್ರೀ ವಾಟಾಳ್ ನಾಗರಾಜ್.—ಆಗಲೇ ಕನ್ನಡದಲ್ಲಿ ಉತ್ತರ ಶುರು ಮಾಡಿದಿರಿ, ಈಗ ಇಂಗ್ಲಿಷ್‌ನಲ್ಲಿ ಶುರು ಮಾಡುತ್ತಿದ್ದೀರಿ ಒಬ್ಬರಿಗೆ ಕನ್ನಡದಲ್ಲಿ ಉತ್ತರ, ಮತ್ತೊಬ್ಬರಿಗೆ ಇಂಗ್ಲೀಷಿನಲ್ಲಿ ಉತ್ತರ ಈ ದ್ವಂದ್ವ ನೀತಿ ಏಕೆ ?

ಶ್ರೀ ಎಂ ಪಿ. ವೆಂಕಟೇಶ್.—ಕನ್ನಡದಲ್ಲೇ ಹೇಳಿಕೆ ನೀಡಬೇಕು, ಸಚಿವಾಲಯದಲ್ಲಿ ಕನ್ನಡದಲ್ಲಿ ತಯಾರಾದ ಪ್ರತಿ ಇರಬೇಕು, ದಯವಾಡಿ ಅದನ್ನು ತರಿಸಿ ಕನ್ನಡದಲ್ಲಿ ಹೇಳಿ.

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಈ ದ್ವಂದ್ವ ನೀತಿ ಸರಿಯಲ್ಲ, ದಯವಿಟ್ಟು ಇಂಥದ್ದೆಲ್ಲ ಬೇಡಿ. ಒಂದು ಸಾರಿ ಇಂಗ್ಲೀಷ್, ಇನ್ನೊಂದು ಸಾರಿ ಕನ್ನಡ, ಇದೇನಿದು ? ಮೊದಲು ಕನ್ನಡದಲ್ಲಿ ಹೇಳಿದಿರಿ. ಈಗಲೂ ಕನ್ನಡದಲ್ಲೇ ಹೇಳಿ.

ಶ್ರೀ ಕೆ. ಜೆ. ಜಾರ್ಜ್.—ಇಂಗ್ಲಿಷ್‌ನಲ್ಲಿ ಓದಬಾರದೆಂದು ರೂಲ್ಸ್ ಇದೆಯೆ ?

ಅಧ್ಯಕ್ಷರು.—ಇಲ್ಲ.

ಶ್ರೀ ಕೆ. ಜೆ. ಜಾರ್ಜ್.—ಅದನ್ನು ಮಾನ್ಯ ಸದಸ್ಯರು ಹೇಗೆ ಅಜ್ಜಕ್ಟ್ ಮಾಡುತ್ತಾರೆ ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಈ ರಾಜ್ಯದಲ್ಲಿ ಚಿತ್ತೂರಿನವರು, ಕೇರಳದವರು, ತಮಿಳು ನಾಡಿನವರು ಎಲ್ಲರೂ ಬರಬಹುದು. ಏನು ಬೇಕಾದರೂ ಹೇಳಬಹುದು. ಯಾವ ಭಾಷೆಯಲ್ಲಿ ಬೇಕಾದರೂ ಹೇಳಬಹುದು. ನಮ್ಮ ರಾಜ್ಯದ ಪರಿಸ್ಥಿತಿ ಎಲ್ಲಿಗೆ ಬಂದಿದೆ ನೋಡಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಕನ್ನಡದ ಬಗ್ಗೆ ಅಭಿಮಾನ ಇರಬೇಕು, ದುರಭಿಮಾನ ಬೇಡ.

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್.—ಕನ್ನಡದಲ್ಲೇ ಹೇಳಿಕೆ ಮಾಡಬೇಕೆಂದು ತಾವು ಆದೇಶ ಕೊಡಿ.